ಕರ್ನಾಟಕ ಸರ್ಕಾರ
# ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ
# Kalyana Karnataka Region Development Board Kalaburagi

ಸಂ: ಕಕಪ್ರಅಮಂ/ಯೋಶಾ/ಸನಿ/01/2021-22/1306/1

ದಿನಾಂಕ: 08/06/2021

:: ಸುತ್ತೋಲೆ ::

ವಿಷಯ: 2021-22ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಅಡಿಯಲ್ಲಿ ಕ್ರಿಯಾ ಯೋಜನೆ ಸಿದ್ಧಪಡಿಸುವ ಕುರಿತು.

*****

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ 2021-22ನೇ ಸಾಲಿನ ಕ್ರಿಯಾ ಯೋಜನೆ ಸಿದ್ಧಪಡಿಸಲು ಈ ಕೆಳಕಂಡ ಸೂಚನೆಗಳನ್ನು ಕಟ್ಟು ನಿಟ್ಟಾಗಿ ಪಾಲಿಸಲು ಸೂಚಿಸಿದೆ.

## I. ಕಾಮಗಾರಿಗಳ ಆಯ್ಕೆ:

1. ಕಾಮಗಾರಿಗಳು ಪ್ರಸ್ತಾಪಿಸುವ ಪೂರ್ವದಲ್ಲಿ ಸರ್ಕಾರಿ ಜಮೀನು/ನಿವೇಶನ ಲಭ್ಯವಿರುವ ಬಗ್ಗೆ ಹಾಗೂ ಯಾವುದೇ ಒತ್ತುವರಿ ಇಲ್ಲದೇ ಇರುವ ಬಗ್ಗೆ ಮತ್ತು ನ್ಯಾಯಾಲಯದಲ್ಲಿ ಹಾಗೂ ಸಾರ್ವಜನಿಕವಾಗಿ ಯಾವುದೇ ತಕರಾರು ಇಲ್ಲದೇ ಇರುವ ಬಗ್ಗೆ ಖಾತರಿ ಪಡಿಸಿಕೊಂಡು ಪ್ರಸ್ತಾವನೆ ಸಲ್ಲಿಸುವಾಗ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಹಾಗೂ ಅನುಷ್ಠಾನ ಇಲಾಖೆಯ ಅಧಿಕಾರಿಗಳು ಜಂಟಿ ಸಹಿಯೊಂದಿಗೆ ಈ ಕೆಳಕಂಡಂತೆ ದೃಢೀಕರಣ ಪತ್ರ ಸಲ್ಲಿಸುವುದು. "ಪ್ರಸ್ತಾಪಿಸಿದ ಕಾಮಗಾರಿಗಳಿಗೆ ಸರ್ಕಾರಿ ಜಮೀನು/ನಿವೇಶನ ಲಭ್ಯವಿದೆ ಹಾಗೂ ಯಾವುದೇ ಒತ್ತುವರಿ ಇರುವುದಿಲ್ಲ ಮತ್ತು ನ್ಯಾಯಾಲಯದಲ್ಲಿ ಹಾಗೂ ಸಾರ್ವಜನಿಕವಾಗಿ ಯಾವುದೇ ತಕರಾರು ಇರುವುದಿಲ್ಲವೆಂದು ದೃಢೀಕರಿಸಲಾಗಿದೆ."
2. ಕಾಮಗಾರಿಗಳು ಪ್ರಸ್ತಾಪಿಸುವ ಪೂರ್ವದಲ್ಲಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಹಾಗೂ ಅನುಷ್ಠಾನ ಇಲಾಖೆಯ ಅಧಿಕಾರಿಗಳು ಜಂಟಿ ಸಹಿಯೊಂದಿಗೆ ಈ ಕೆಳಕಂಡಂತೆ ದೃಢೀಕರಣ ಪತ್ರ ಸಲ್ಲಿಸುವುದು. "ಪ್ರಸ್ತಾಪಿಸಿದ ಕಾಮಗಾರಿಗಳು ಈ ಹಿಂದೆ ಕೆ.ಕೆ.ಆರ್.ಡಿ.ಬಿ. ಅಡಿಯಲ್ಲಿ ಹಾಗೂ ಇತರೆ ಯಾವುದೇ ಯೋಜನೆ ಅಡಿಯಲ್ಲಿ ತೆಗೆದುಕೊಂಡಿರುವುದಿಲ್ಲ ಮತ್ತು ಪ್ರಸ್ತುತ ವರ್ಷದಲ್ಲಿ ಯಾವುದೇ ಯೋಜನೆಯಡಿಯಲ್ಲಿ ಪ್ರಸ್ತಾಪಿಸಿರುವುದಿಲ್ಲವೆಂದು ದೃಢೀಕರಿಸಲಾಗಿದೆ".
3. ಕರ್ನಾಟಕ ಸರ್ಕಾರ/ ಭಾರತ ಸರ್ಕಾರದಿಂದ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳ (Schemes) / ವಿನ್ಯಾಸ (Type design) ಸರಕಾರದ ಮಾರ್ಗಸೂಚಿಗಳನ್ವಯ ಕಾಮಗಾರಿಗಳು/ ಕಾರ್ಯಕ್ರಮಗಳು ಮಾತ್ರ ಕ್ರಿಯಾ ಯೋಜನೆಯಲ್ಲಿ ಪ್ರಸ್ತಾಪಿಸುವುದು. ಇತರೆ ಬೇರೆ ಕಾಮಗಾರಿಗಳು/ ಕಾರ್ಯಕ್ರಮಗಳು ಪ್ರಸ್ತಾಪಿಸಬೇಕಾಗಿದ್ದಲ್ಲಿ ಅವುಗಳನ್ನು ಸಂಬಂಧಿಸಿದ ಮಾರ್ಗಸೂಚಿಗಳು/ ವಿನ್ಯಾಸವನ್ನು ಸಂಬಂಧಪಟ್ಟ ಆಡಳಿತಾತ್ಮಕ ಇಲಾಖೆಯಿಂದ ಕಡ್ಡಾಯವಾಗಿ ಅನುಮೋದನೆ ಪಡೆಯತಕ್ಕದ್ದು.
4. ಶಾಲಾ ಹಾಗೂ ಕಾಲೇಜುಗಳ ಕಟ್ಟಡ, ಅಂಗನವಾಡಿ ಕಟ್ಟಡ, ಆರೋಗ್ಯ ಕೇಂದ್ರಗಳ ಕಟ್ಟಡ ಮತ್ತು ವಸತಿ ನಿಲಯಗಳ ಕಟ್ಟಡಗಳು, ಇತ್ಯಾದಿ ಕಟ್ಟಡಗಳಿಗೆ ಸಂಬಂಧಪಟ್ಟಂತೆ ಕಟ್ಟಡ ಆಖುಂಟಿ ಹಾಗೂ ನಿಗದಿಪಡಿಸಿದ ಅನುದಾನಕ್ಕೆ ಅದಕ್ಕನುಗುಣವಾಗಿ ಅನುದಾನವನ್ನು ನಿಗದಿಪಡಿಸುವುದು. ಸರ್ಕಾರದಿಂದ ಮಂಜೂರಾದ ಟೈಪ್ ಡಿಸೈನ್ ಮತ್ತು ಟಿಪಿಕಲ್ ಎಸ್ಟಿಮೇಟ್ ಇದ್ದರೆ ಅವುಗಳನ್ನು ಅಳವಡಿಸಿಕೊಳ್ಳತಕ್ಕದ್ದು. **ಕಟ್ಟಡ ರಿಪೇರಿ ಮತ್ತು ವೈಟ್ ವಾಷಿಂಗ್ ಅಥವಾ ಪ್ಲಾಸ್ಟರಿಂಗ್ ಅಥವಾ ಪೇಂಟಿಂಗ್ ಇತ್ಯಾದಿ ಕಾಮಗಾರಿಗಳಿಗೆ ಅವಕಾಶವಿರುವುದಿಲ್ಲ.**
5. ಉಪಕರಣಗಳು/ ಪೀಠೋಪಕರಣಗಳು ಸಂಬಂಧಪಟ್ಟ ಇಲಾಖೆಗಳಿಂದ ನಿಗದಿಪಡಿಸಿದ ತಾಂತ್ರಿಕ ಸ್ಪೇಸಿಫಿಕೇಶನ್, ಅದರ ಘಟಕದರ, ಇತ್ಯಾದಿ ವಿವರಗಳನ್ನು ಪರಿಶೀಲಿಸಿ ಕ್ರಿಯಾ ಯೋಜನೆಯಲ್ಲಿ ಪ್ರಸ್ತಾಪಿಸುವುದು. ಮಂಡಳಿಯಿಂದ ನಿರ್ವಹಣೆಗೆ ಸಂಬಂಧಿಸಿದ ವೆಚ್ಚವನ್ನು ಮಂಡಳಿಯಿಂದ ಒದಗಿಸುವುದಿಲ್ಲ. ಸಂಬಂಧಪಟ್ಟ ಇಲಾಖೆಯು ನಿರ್ವಹಣೆಗೆ ತಗಲುವ ವೆಚ್ಚವನ್ನು ಇಲಾಖಾ ಬಜೆಟ್‌ದಲ್ಲಿ ಅಳವಡಿಸಿಕೊಳ್ಳತಕ್ಕದ್ದು. ಉಪಕರಣಗಳ ವಾರ್ಷಿಕ ನಿರ್ವಹಣೆ (AMC) ಯನ್ನು ಕೂಡ ಕಡ್ಡಾಯವಾಗಿ ಇಲಾಖಾ ಅನುದಾನದಿಂದ ಕೈಗೊಳ್ಳತಕ್ಕದ್ದು. ನಿರ್ವಹಣೆ ವೈಫಲ್ಯದಿಂದ ಉಪಕರಣಗಳು ಕಾರ್ಯನಿರ್ವಹಿಸದೇ ಇದ್ದಲ್ಲಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೇ ಜವಾಬ್ದಾರರು ಹಾಗೂ ಅವರನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತಿನ ಕ್ರಮ ಜರುಗಿಸಲಾಗುವುದು.
6. ಕಾಮಗಾರಿಗಳು/ ಉಪಕರಣಗಳು/ ಪೀಠೋಪಕರಣಗಳು ಇತ್ಯಾದಿ ಕಾರ್ಯಕ್ರಮಗಳನ್ನು ಕ್ರಿಯಾ ಯೋಜನೆಯಲ್ಲಿ ಪ್ರಸ್ತಾಪಿಸುವ ಪೂರ್ವದಲ್ಲಿ ಅವುಗಳ ಅಗತ್ಯತೆ ಹಾಗೂ ಅವುಗಳು ಉಪಯೋಗಿಸಲು ಸಿಬ್ಬಂದಿಯವರ ಲಭ್ಯತೆ ಖಾತ್ರಿಪಡಿಸಿಕೊಂಡು ಪ್ರಸ್ತಾಪಿಸುವುದು. ಯಾವುದೇ ಕಾರಣಕ್ಕೆ ಉಪಯುಕ್ತವಾಗದೇ ಇದ್ದಲ್ಲಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೇ ಜವಾಬ್ದಾರರು ಹಾಗೂ ಅವರನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತಿನ ಕ್ರಮ ಜರುಗಿಸಲಾಗುವುದು.
7. RO ಫಿಲ್ಟರ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಮಾರ್ಗಸೂಚಿಗಳನ್ವಯ ಪ್ರಸ್ತಾಪಿಸುವುದು. ನಿರ್ವಹಣೆ ಸೇರಿಸಿ ಕಾಮಗಾರಿಗಳು ಪ್ರಸ್ತಾಪಿಸುವುದು. ಕಾಮಗಾರಿಗಳು ಪೂರ್ಣಗೊಂಡ ಮೇಲೆ ಕಡ್ಡಾಯವಾಗಿ ಗ್ರಾಮ ಪಂಚಾಯತಿಗಳಿಗೆ ನಿಯಮಾನುಸಾರ ಹಸ್ತಾಂತರಿಸುವುದು ಹಾಗೂ ನಿರ್ವಹಣೆಯನ್ನು ಗ್ರಾಮ ಪಂಚಾಯತಿಗಳು ನಿರ್ವಹಿಸುವುದು. ಈ ಕುರಿತು ಗ್ರಾಮ ಪಂಚಾಯತಿಯಿಂದ ದೃಢೀಕರಣ ಪತ್ರ ಪಡೆಯುವುದು.
8. ರಸ್ತೆ ಮತ್ತು ಸೇತುವೆ ಕಾಮಗಾರಿಗಳು ಪ್ರಸ್ತಾಪಿಸುವ ಪೂರ್ವದಲ್ಲಿ ಯಾವ ಇಲಾಖೆಯ ಒಡತನಕ್ಕೆ/ ನಿರ್ವಹಣೆಗೆ ಸಂಬಂಧಿಸಿದ್ದು ಇರುತ್ತದೆ. ಆ ಇಲಾಖೆಯ ಹೆಸರಿನೊಂದಿಗೆ ಪ್ರಸ್ತಾಪಿಸುವುದು ಹಾಗೂ ಸದರಿ ರಸ್ತೆಗಳು ಗ್ರಾಮೀಣ ರಸ್ತೆಗಳು/ಎಂ.ಡಿ.ಆರ್/ಎಸ್.ಹೆಚ್ ರಸ್ತೆಗಳ ಅನುಗುಣವಾಗಿ PMGSY/MDR/SH Norms ಗಳನ್ವಯ ಕಾಮಗಾರಿಗಳು ಪ್ರಸ್ತಾಪಿಸುವುದು. ರೂ 25.00 ಲಕ್ಷ ಮೊತ್ತಕ್ಕಿಂತ ಕಡಿಮೆ ಇರುವ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ. ರಸ್ತೆ ರಿಪೇರಿ ಕಾಮಗಾರಿಗಳಿಗೆ ಅವಕಾಶ ಇರುವುದಿಲ್ಲ.

9. ರಸ್ತೆ ಕಾಮಗಾರಿಗಳನ್ನು ಕಡ್ಡಾಯವಾಗಿ ಪೂರ್ಣ ಪ್ರಮಾಣದಲ್ಲಿ (ಒಂದು ಸ್ಥಳದಿಂದ ಇನ್ನೊಂದು ಸ್ಥಳದ ಪೂರ್ಣ ರಸ್ತೆಯ ಉದ್ದತೆ ತೆಗೆದುಕೊಂಡಿರಬೇಕು) ಮತ್ತು ಸಂಪೂರ್ಣವಾಗಿ (ರಸ್ತೆ ನಿರ್ಮಾಣವನ್ನು ಮುರಮ್– ಮೆಟಲಿಂಗ್ ಮತ್ತು ಡಾಂಬರೀಕರಣ ಒಳಗೊಂಡಿರತಕ್ಕದ್ದು) ತೆಗೆದುಕೊಂಡಿರತಕ್ಕದ್ದು. ಅದಕ್ಕೆ ಬೇಕಾಗುವ ಪೂರ್ಣ ಪ್ರಮಾಣದ ಅನುದಾನವನ್ನು ಕ್ರಿಯಾ ಯೋಜನೆಯಲ್ಲಿ ಪ್ರಸ್ತಾಪಿಸುವುದು. ಅಪೂರ್ಣ ರಸ್ತೆ ಅಥವಾ ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಸಂಪರ್ಕ ಹೊಂದದೇ ಇದ್ದಲ್ಲಿ ಮತ್ತು ಪೂರ್ಣ ಪ್ರಮಾಣ ಅನುದಾನ ಪ್ರಸ್ತಾಪಿಸದೇ ಇದ್ದಲ್ಲಿ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳೇ ಜವಾಬ್ದಾರರು.

10. ಗ್ರಾಮದೊಳಗಿನ ರಸ್ತೆ ಕಾಮಗಾರಿಗಳನ್ನು ಪ್ರಸ್ತಾಪಿಸುವಾಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯ ಮಾರ್ಗಸೂಚಿ ಅನ್ವಯ ಸಂಪೂರ್ಣ ಗ್ರಾಮಗಳನ್ನು ಆಯ್ಕೆ ಮಾಡುವುದು. ಸದರಿ ಗ್ರಾಮ ಪೂರ್ಣಗೊಂಡಿದ್ದಲ್ಲಿ ಮಾತ್ರ ಬೇರೆ ಗ್ರಾಮ ಆಯ್ಕೆ ಮಾಡುವುದು ಹಾಗೂ ಪೂರ್ಣ ಪ್ರಮಾಣದ ಅನುದಾನ ನಿಗದಿಪಡಿಸುವುದು. ಗ್ರಾಮದೊಳಗಿನ ರಸ್ತೆಗಳನ್ನು ಪ್ರಸ್ತಾಪಿಸುವಾಗ ಈ ಕೆಳಕಂಡ ಸೂಚನೆಗಳನ್ನು ಕಟ್ಟು ನಿಟ್ಟಾಗಿ ಪಾಲಿಸುವುದು.

i. ಗ್ರಾಮದೊಳಗಿನ ರಸ್ತೆಗಳನ್ನು ಪ್ರಸ್ತಾಪಿಸುವಾಗ ಒಂದೆರಡು ರಸ್ತೆಗಳನ್ನು ಮಾತ್ರ ಪ್ರಸ್ತಾಪಿಸಲಾಗುತ್ತಿದೆ. ಇದು ಗ್ರಾಮದ ಅಭಿವೃದ್ಧಿಗೆ ಪೂರಕವಾಗಿರುವುದಿಲ್ಲ. ಗ್ರಾಮ ವಿಕಾಸ ಯೋಜನೆಯ ಮಾರ್ಗಸೂಚಿಯನ್ವಯ ಗ್ರಾಮದೊಳಗಿನ ಪೂರ್ಣ ರಸ್ತೆ ಕಾಮಗಾರಿಗಳನ್ನು ಪ್ರಸ್ತಾಪಿಸುವುದು.

ii. ಗ್ರಾಮದೊಳಗಿನ ರಸ್ತೆ ಮತ್ತು ಚರಂಡಿ ಕಾಮಗಾರಿಗಳಿಗೆ ಗ್ರಾಮದ ಸಮಗ್ರ ಯೋಜನೆ ನಕ್ಷೆಯೊಂದಿಗೆ ಸಿದ್ಧಪಡಿಸುವುದು. ಸದರಿ ಯೋಜನೆಯನ್ನು ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯುವುದು.

iii. ಪ್ರತಿಯೊಂದು ರಸ್ತೆಯನ್ನು ಎಲ್ಲಿಂದ ಎಲ್ಲಿಯವರೆಗೆ ತೆಗೆದುಕೊಳ್ಳಲಾಗಿದೆ ಎಂದು ಸ್ಪಷ್ಟವಾಗಿ ನಮೂದಿಸುವುದು ಹಾಗೂ ಪ್ರತಿ ರಸ್ತೆ ಸಂಖ್ಯೆಯನ್ನು ನಮೂದಿಸುವುದು. ಸದರಿ ರಸ್ತೆ ಈ ಹಿಂದೆ ಯಾವಾಗ ಹಾಗೂ ಯಾವ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿದೆ ಹಾಗೂ ಇತರೆ ವಿವರಗಳನ್ನು ಷರಾದಲ್ಲಿ ನಮೂಸುವುದು.

iv. ಗ್ರಾಮದೊಳಗಿನ ರಸ್ತೆಗಳನ್ನು ಕಡ್ಡಾಯವಾಗಿ ಜನವಸತಿ ಇರುವ ಸ್ಥಳಗಳಲ್ಲಿ ಮಾತ್ರ ತೆಗೆದುಕೊಳ್ಳತಕ್ಕದ್ದು. ಜನವಸತಿ ಇಲ್ಲದ ಕಡೆ ಹಾಗೂ ಖಾಸಗಿ ಲೇಔಟಗಳಲ್ಲಿ ರಸ್ತೆಗಳನ್ನು ತೆಗೆದುಕೊಳ್ಳತಕ್ಕದ್ದಲ್ಲ.

v. ಗ್ರಾಮದೊಳಗಿನ ರಸ್ತೆಗಳನ್ನು ಆಯ್ಕೆ ಮಾಡುವಾಗ ಮುಖ್ಯರಸ್ತೆಗಳು, ಜನದಟ್ಟಣೆ ಹಾಗೂ ವಾಹನಗಳು ಓಡಾಡುವ ರಸ್ತೆಗಳು ಆದ್ಯತೆ ಮೇರೆಗೆ ಆಯ್ಕೆ ಮಾಡುವುದು. ನಂತರ ಇತರೆ ಒಳ ರಸ್ತೆಗಳನ್ನು ತೆಗೆದುಕೊಳ್ಳುವುದು.

vi. ಗ್ರಾಮವಾರು ಕ್ರಿಯಾ ಯೋಜನೆ ರೂಪಿಸಿ ಮಾರ್ಗಸೂಚಿಯನ್ವಯ ಅನುಮೋದನೆ ಪಡೆದು ಗ್ರಾಮವಾರು ಪ್ಯಾಕೇಜ್ ಮಾಡಿ ಟೆಂಡರ ಕರೆದು ಅನುಷ್ಠಾನ ಮಾಡುವುದು.

11. ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆಗಳಿಗೆ ಸಂಬಂಧಪಟ್ಟಂತೆ ಕರ್ನಾಟಕ ಅನುಸೂಚಿತ ಜಾತಿಗಳ ಉಪ–ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ನಿಯಮಗಳು 2017ರ ಕುರಿತಂತೆ ಅಧಿಸೂಚನೆ ಎಸ್.ಡಬ್ಲ್ಯೂ.ಡಿ 167 ಎಸ್.ಎಲ್.ಪಿ 2017, ದಿನಾಂಕ: 08-11-2017ರಂತೆ ಅನುಸೂಚಿತ ಜಾತಿಗಳು/ ಅನುಸೂಚಿತ ಪಂಗಡಗಳ ವಾಸಸ್ಥಳವೆಂದರೆ ಎಲ್ಲಿ ಅನುಸೂಚಿತ ಜಾತಿ / ಅನುಸೂಚಿತ ಪಂಗಡಗಳ ಸಂಯೋಜಿತ ಜನಸಂಖ್ಯೆಯೂ

i. ಶೇಕಡಾ 75 ಕ್ಕಿಂತಲೂ ಹೆಚ್ಚಿರುವ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳು ಅಥವಾ ಸಂಯೋಜಿತ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಹೊಂದಿರುವ ನಿವಾಸಿಗಳು.

ii. ಶೇಕಡಾ 50 ಕ್ಕಿಂತಲೂ ಹೆಚ್ಚಿದ್ದು ಶೇಕಡಾ 75ರ ವರೆಗಿನ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳು ಅಥವಾ ಸಂಯೋಜಿತ ಅನುಸೂಚಿತ ಜಾತಿಗಳು/ಅನುಸೂಚಿತ ಬುಡಕಟ್ಟುಗಳು ಹೊಂದಿರುವ ನಿವಾಸಿಗಳು.

iii. ಶೇಕಡಾ 50 ಕ್ಕಿಂತಲೂ ಕಡಿಮೆ ಇರುವ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳು ಅಥವಾ ಸಂಯೋಜಿತ ಅನುಸೂಚಿತ ಜಾತಿಗಳು/ ಅನುಸೂಚಿತ ಬುಡಕಟ್ಟುಗಳು ಹೊಂದಿರುವ ನಿವಾಸಗಳನ್ನು ಆಯ್ಕೆ ಮಾಡಲು ಅವಕಾಶವಿರುತ್ತದೆ.

iv. ಮುಂದುವರೆದು, ಕರ್ನಾಟಕ ಅನುಸೂಚಿತ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲ ಹಂಚಿಕೆ ಮತ್ತು ಬಳಕೆ) (ತಿದ್ದುಪಡಿ) ಅಧಿನಿಯಮ, 2017)ರ ಅಧಿಸೂಚನೆ ಕುರಿತಂತೆ ಅಧಿಸೂಚನ ಸಂಖ್ಯೆ: ಸಂವ್ಯಶಾಇ 27 ಶಾಸನ 2017, ಬೆಂಗಳೂರು, ದಿನಾಂಕ: 17-07-2017ರಂತೆ ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ ವಾಸಸ್ಥಳ ಎಂದರೆ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳು ಅಥವಾ ಸಂಯೋಜಿತ ಅನುಸೂಚಿತ ಜಾತಿಗಳು/ ಅನುಸೂಚಿತ ಬುಡಕಟ್ಟುಗಳು ಹೊಂದಿರುವ ಆ ವಾಸಸ್ಥಳದ ಒಟ್ಟು ಜನಸಂಖ್ಯೆಯ 50 ಶೇಕಡಾಗಿಂತ ಕಡಿಮೆ ಇರುವ ವಾಸಸ್ಥಳವನ್ನು ಸಹ ಪರಿಗಣಿಸಬಹುದಾಗಿರುತ್ತದೆ. ಅದರನ್ವಯ, ಜನಸಂಖ್ಯೆಯ 50 ಶೇಕಡಾಗಿಂತ ಕಡಿಮೆ ಇರುವ ವಾಸಸ್ಥಳವನ್ನು ಸಹ ಪರಿಗಣನೆಗೆ ತೆಗೆದುಕೊಂಡು ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆಗಳಿಗೆ ಸಂಬಂಧಿಸಿದಂತೆ ತಿಳಿಸಿರುವಂತೆ ಕಾಮಗಾರಿಗಳು ಪ್ರಸ್ತಾಪಿಸಬಹುದು. ಅದೇ ರೀತಿ, ಮುಖ್ಯಮಂತ್ರಿ ಮಾದರಿ ಗ್ರಾಮ ಕಾರ್ಯಕ್ರಮದ ಮಾರ್ಗಸೂಚಿಗಳಂತೆ ಗ್ರಾಮವಾರು ಕ್ರಿಯಾ ಯೋಜನೆಯನ್ನು ತಯ್ಯಾರಿಸುವಾಗ ಸಹ ಅಧಿನಿಯಮದ ತಿದ್ದುಪಡಿಯಂತೆ ಜನವಸತಿಯನ್ನು ಪರಿಗಣಿಸಿ, ಗ್ರಾಮಗಳನ್ನು ಆಯ್ಕೆಮಾಡಿ, ನಿಯಮಾನುಸಾರ ಅನುಮೋದನೆ ಪಡೆದು, ಗ್ರಾಮವಾರು ಪ್ಯಾಕೇಜ ಮಾಡಿ, ಟೆಂಡರ ಕರೆದು ಅನುಷ್ಠಾನ ಮಾಡುವುದು.

v. ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆಗಳಿಗೆ ಸಂಬಂಧಪಟ್ಟಂತೆ ಆಯಾ ತಾಲೂಕು ಸಮಾಜ ಕಲ್ಯಾಣ ಅಧಿಕಾರಿ/ ಎಸ್.ಟಿ. ಅಭಿವೃದ್ಧಿ ಅಧಿಕಾರಿಯಿಂದ ಕಡ್ಡಾಯವಾಗಿ ಪ್ರಮಾಣಪತ್ರವನ್ನು ಪಡೆಯಬೇಕು. ಈ ಯೋಜನೆಯ ಕಾಮಗಾರಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಲೋಪ ದೋಷಗಳು ಕಂಡು ಬಂದಲ್ಲಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಹಾಗೂ ಅನುಷ್ಠಾನ ಇಲಾಖಾ ಅಧಿಕಾರಿಗಳೇ ನೇರ ಹೊಣೆಗಾರರು.

12. ನಗರ/ಪಟ್ಟಣ ಪ್ರದೇಶದ ವಾರ್ಡಗಳಲ್ಲಿನ ಒಳರಸ್ತೆ ಕಾಮಗಾರಿಗಳು ನಗರ ಸ್ಥಳೀಯ ಸಂಸ್ಥೆಗಳು ಮನೆ ತೆರಿಗೆ ಹಾಗೂ ಇತರೆ ತೆರಿಗಳೊಂದಿಗೆ ಸ್ವಂತ ಸಂಪನ್ಮೂಲಗಳಿಂದ ಕೈಗೊಳ್ಳಬೇಕಾಗಿರುತ್ತದೆ. ಆದರೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಂಪನ್ಮೂಲಗಳ ಕೊರತೆಯಿರುವುದರಿಂದ ಮತ್ತು ಅಭಿವೃದ್ಧಿ ಹಿತದೃಷ್ಟಿಯಿಂದ ನಗರ ಸ್ಥಳೀಯ ಸಂಸ್ಥೆಗಳು ಸ್ವಾವಲಂಬಿಕಾರಿಯಾಗಲು ಸಹಕಾರಿಯಾಗುವಂತೆ ನಗರ/ ಪಟ್ಟಣ ಪ್ರದೇಶದ ಒಳ ರಸ್ತೆಗಳನ್ನು ಪ್ರಸ್ತಾಪಿಸುವ ಪೂರ್ವದಲ್ಲಿ ಈ ಕೆಳಕಂಡ ಸೂಚನೆಗಳನ್ನು ಕಟ್ಟು ನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ.

i. ನಗರ/ಪಟ್ಟಣ ಪ್ರದೇಶದ ವಾರ್ಡಗಳಲ್ಲಿನ ಒಳ ರಸ್ತೆಗಳು ಕಾನೂನಿನ ಪ್ರಕಾರ ಇದ್ದಲ್ಲಿ ಮಾತ್ರ ತೆಗೆದುಕೊಳ್ಳುವುದು ಹಾಗೂ ಆಯುಕ್ತರು/ಮುಖ್ಯಾಧಿಕಾರಿಗಳು ಸದರಿ ಕಾಮಗಾರಿಗಳು ಕಾನೂನು ಪ್ರಕಾರ ತೆಗೆದುಕೊಳ್ಳಲು ಯಾವುದೇ ಅಡೆತಡೆಗಳು ಇರುವುದಿಲ್ಲವೆಂದು ದೃಢೀಕರಣ ಪತ್ರ ನೀಡುವುದು.
**ಉದಾಹರಣೆ :** ಅ ಅನಧಿಕೃತ ಲೇಔಟಗಳು ಎಲ್ಲ ಕಾನೂನಿನ ಪ್ರಕಾರ ಅಭಿವೃದ್ಧಿ ಕಾಮಗಾರಿಗಳನ್ನು ನಗರ ಸ್ಥಳೀಯ ಸಂಸ್ಥೆಗಳು ಕೈಗೊಳ್ಳುವುದಿಲ್ಲ ಅಥವಾ ಇತ್ತೀಚಿಗೆ ಯು.ಜಿ.ಡಿ ಹಾಗೂ ನೀರು ಸರಬರಾಜು ಕಾಮಗಾರಿಗಳು ತೆಗೆದುಕೊಂಡಿದ್ದ ಆ ರಸ್ತೆ ರಿಸ್ಟೋರ್ ಮಾಡುವ ಕಾಮಗಾರಿಗಳಿಗೆ ಯು.ಜಿ.ಡಿ ಹಾಗೂ ನೀರು ಸರಬರಾಜು ಕಾಮಗಾರಿಗಳ ಗುತ್ತಿಗೆದಲ್ಲೇ ಅವಕಾಶ ಕಲ್ಪಿಸಲಾಗಿರುತ್ತದೆ, ಇತ್ಯಾದಿ ಕಾಮಗಾರಿಗಳನ್ನು ತೆಗೆದುಕೊಳ್ಳಬಾರದು.

ii. ಸಂಬಂಧಿಸಿದ ವಾರ್ಡಗಳಲ್ಲಿ ಈವರೆಗೆ ಸ್ವೀಕೃತಿಯಾದ ಅಭಿವೃದ್ಧಿ ಶುಲ್ಕವನ್ನು ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ವಂತಿಗೆ ನೀಡುವುದು. ಅಭಿವೃದ್ಧಿ ಶುಲ್ಕವನ್ನು ಈಗಾಗಲೇ ಸಂಬಂಧಿಸಿದ ವಾರ್ಡಗಳಲ್ಲಿ ಬಳಕೆ ಮಾಡಿದ್ದರೆ ಆಯುಕ್ತರು/ಮುಖ್ಯಾಧಿಕಾರಿಗಳು ದೃಢೀಕರಣ ಪತ್ರ ನೀಡುವುದು. ಮುಂದಿನ ದಿನಗಳಲ್ಲಿ ಸ್ವೀಕರಿಸುವ ಅಭಿವೃದ್ಧಿ ಶುಲ್ಕವನ್ನು ಅದೇ ವಾರ್ಡಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವುದು. ಇಲ್ಲದಿದ್ದಲ್ಲಿ ಸದರಿ ಅನುದಾನವು ಮಂಡಳಿಗೆ ಮರಳಿಸುವುದು.

iii. ಸಂಬಂಧಿಸಿದ ವಾರ್ಡಗಳಲ್ಲಿ ತೆರಿಗೆಯ ಡಿಮಾಂಡ್ ಅನುಗುಣವಾಗಿ ಶೇ.80 ರಷ್ಟು ಮನೆ ಕರ ವಸೂಲಿ ಆಗಿರಬೇಕು.

iv. ಸಂಬಂಧಿಸಿದ ವಾರ್ಡಗಳಲ್ಲಿ ಯು.ಜಿ.ಡಿ. ಹಾಗೂ ನೀರು ಸರಬರಾಜು ಕಾಮಗಾರಿಗಳು ಚಾಲ್ತಿಯಲ್ಲಿದ್ದರೆ ಅಥವಾ ಮುಂಬರುವ ದಿನಗಳಲ್ಲಿ ತೆಗೆದುಕೊಳ್ಳಲು ಯೋಜಿಸಲಾಗಿದ್ದರೆ ಅಂತಹ ಸ್ಥಳಗಳಲ್ಲಿ ರಸ್ತೆ ಕಾಮಗಾರಿಗಳು ತೆಗೆದುಕೊಳ್ಳತಕ್ಕದಲ್ಲ ಕಾಮಗಾರಿಗಳು ತೆಗೆದುಕೊಳ್ಳಬೇಕಾಗಿದ್ದಲ್ಲಿ ಆಯುಕ್ತರು/ ಮುಖ್ಯಾಧಿಕಾರಿಗಳು "ಸಂಬಂಧಿಸಿದ ವಾರ್ಡಗಳಲ್ಲಿ ಯಾವುದೇ ಯು.ಜಿ.ಡಿ. ಕಾಮಗಾರಿಗಳು ಹಾಗೂ ನೀರು ಸರಬರಾಜು ಕಾಮಗಾರಿಗಳು ಕೈಗೊಳ್ಳುವುದು ಇರುವುದಿಲ್ಲ" ಎಂದು ದೃಢೀಕರಣ ಪತ್ರ ಸಲ್ಲಿಸುವುದು.

v. ನಗರ/ಪಟ್ಟಣ ಪ್ರದೇಶದ ವಾರ್ಡಗಳಲ್ಲಿನ ಒಳ ರಸ್ತೆ ಕಾಮಗಾರಿಗಳು ಡಾಂಬರೀಕರಣ ರಸ್ತೆಗಳನ್ನು ತೆಗೆದುಕೊಳ್ಳುವುದು. ತಾಂತ್ರಿಕವಾಗಿ ಅವಶ್ಯಕತೆವಿದ್ದಲ್ಲಿ ಮಾತ್ರ ಸಿ.ಸಿ.ರಸ್ತೆ ಕಾಮಗಾರಿಗಳನ್ನು ತೆಗೆದುಕೊಳ್ಳವುದು. ಚರಂಡಿ ಅವಶ್ಯಕತೆವಿದ್ದಲ್ಲಿ ಚರಂಡಿ ಹಾಗೂ ರಸ್ತೆ ಕಾಮಗಾರಿಗಳು ಒಟ್ಟಿಗೆ ತೆಗೆದುಕೊಳ್ಳುವುದು.

## II. ಅನುಷ್ಠಾನ ಇಲಾಖೆ ನೇಮಕ:-

ಕ್ರಿಯಾ ಯೋಜನೆಯಲ್ಲಿ ಪ್ರಸ್ತಾಪಿಸಿದ ಕಾಮಗಾರಿಗಳಿಗೆ ಅನುಷ್ಠಾನ ಇಲಾಖೆಯನ್ನು ಆಯ್ಕೆ ಮಾಡುವುದು ಸಂಪೂರ್ಣ ಜವಾಬ್ದಾರಿ ಜಿಲ್ಲಾಧಿಕಾರಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಕಾರ್ಯದರ್ಶಿಗಳು, ಕ.ಕ.ಪ್ರ.ಅ.ಮಂಡಳಿ, ಕಲಬುರಗಿ ಇವರಿಗೆ ಆಯಾ ಸಂದರ್ಭಕ್ಕನುಸಾರವಾಗಿ ಇರುವುದು. ಈ ಕುರಿತಂತೆ ಆಯಾ ಇಲಾಖೆಗಳಿಂದ ಕಾರ್ಯಾನುಷ್ಠಾನಗೊಳಿಸುತ್ತಿರುವ ಕಾಮಗಾರಿಗಳ ಸ್ವರೂಪಗಳಿಗನುಸಾರವಾಗಿ ಈ ಕೆಳಕಂಡಂತೆ ಅನುಷ್ಠಾನ ಇಲಾಖೆಗಳನ್ನು ಪರಿಗಣಿಸಲು ಸೂಚಕವಾಗಿರುತ್ತದೆ.

| Sl. No. | Type of work | Implementing agency |
|---|---|---|
| 1 | MDR & SH road | PWD |
| 2 | Rural connectivity roads | PRED / PMGSY |
| 3 | Internal roads within the village limits | PRED / KRIDL |
| 4 | Internal roads within the City limits | PWD / ULB |
| 5 | Building works | |
| | Low value(Rooms & small building) | PRED / KRIDL |
| | High valuc | PWD / KRIDL |
| | Innovative and cost saving works (as per the condition prescribed in the concerned KTPP Act exemption order) | NK / CASHUTECH |
| 6 | Rural water supply works | RWS |
| 7 | Urban water supply & underground drainage works | KUWS & DB |

1. ಒಂದು ಅನುಷ್ಠಾನ ಇಲಾಖೆಯವರು ಕಾರ್ಯ ಅನುಷ್ಠಾನದಲ್ಲಿ ಅಕ್ಷಮತೆ ಅಥವಾ ಹಿನ್ನಡೆ ತೋರಿಸಿದಲ್ಲಿ ಮಾತ್ರ ಮೇಲೆ ತಿಳಿಸಿದ ಸೂತ್ರದ ಬದಲಾಗಿ ಬೇರೆ ಅನುಷ್ಠಾನ ಇಲಾಖೆಯನ್ನು ಜಿಲ್ಲಾಧಿಕಾರಿಗಳು/ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಅವರ ಹಂತದಲ್ಲಿಯೇ

ಸಕಾರಣಗಳೊಂದಿಗೆ ನೇಮಿಸಬಹುದು. ಈ ಕಾರಣವನ್ನು ಹೊರತು ಪಡಿಸಿ ಬೇರೆ ಯಾವ ಕಾರಣಕ್ಕೆ ಮನಸ್ಸು ಇಚ್ಛೆಯಂತೆ ಅನುಷ್ಠಾನ ಇಲಾಖೆಗಳನ್ನು ನೇಮಿಸುವುದು ಅಥವಾ ಬದಲಾಯಿಸುವುದು ಮಾಡತಕ್ಕದ್ದಲ್ಲ.

2. ಮೇಲೆ ತೋರಿಸಿದಂತಹ ಕಾಮಗಾರಿಗಳನ್ನು ಹೊರತುಪಡಿಸಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟ ಇಲಾಖೆಗಳನ್ನೇ ಅನುಷ್ಠಾನ ಇಲಾಖೆಗಳನ್ನಾಗಿ ನೇಮಿಸುವುದು. ಉದಾಹರಣೆಗೆ ಜಲಾನಯನ ಕಾಮಗಾರಿಗಳನ್ನು ಕೃಷಿ ಇಲಾಖೆಗೆ ವಹಿಸುವುದು.

3. ಒಂದು ವೇಳೆ ಕೆ.ಆರ್.ಐ.ಡಿ.ಎಲ್ ಗೆ ವಹಿಸಿದಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 262 ವೆಚ್ಚ-12/2017 ದಿನಾಂಕ: 22.04.2017 ರಂತೆ ಕ್ರಮ ಕೈಗೊಳ್ಳುವುದು, ಹಾಗೂ ಸಂಬಂಧಪಟ್ಟ ಕೆ.ಆರ್.ಐ.ಡಿ.ಎಲ್ ಅಧಿಕಾರಿಯಿಂದ ಕ್ರಿಯಾ ಯೋಜನೆ ಅನುಮೋದನೆ ನೀಡುವ ಮುಂಚೆ ಹಾಗೂ ಅಂದಾಜು ಪತ್ರಿಕೆಯಲ್ಲಿ ಈ ಕೆಳಕಂಡಂತೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಪಡೆಯುವುದು.

-: *ಪ್ರಮಾಣ ಪತ್ರ* :-

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ವಹಿಸಲಾದ ಎಲ್ಲಾ ಕಾಮಗಾರಿಗಳನ್ನು ಸರ್ಕಾರದ ಆದೇಶದಂತೆ ಸದರಿ ಕಾಮಗಾರಿಗಳನ್ನು ನಮ್ಮ ಸಂಸ್ಥೆಯ ಆಂತರೀಕ ಸಂಪನ್ಮೂಲಗಳಿಂದಲೆ ಕಾರ್ಯಗತಗೊಳಿಸಲಾಗುವುದು. ಬೇರೆಯವರ ಮುಖಾಂತರ ಕೈಗೊಳ್ಳುವುದಾದಲ್ಲಿ ಕೆ.ಟಿ.ಪಿ.ಪಿ ಕಾಯ್ದೆ ಮತ್ತು ಅಧಿನಿಯಮಗಳು, ಇ-ಸಂಗ್ರಹಣೆ ವೇದಿಕೆ ಮೂಲಕವೇ ಕೈಗೊಳ್ಳಲಾಗುವುದೆಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ. ತಪ್ಪಿದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಕಾನೂನಿನಂತೆ ಕ್ರಮಕ್ಕೆ ಬದ್ಧನ್ನಾಗಿರುತ್ತೇನೆ

ಸಹಿ/-
ಕೆ.ಆರ್.ಐ.ಡಿ.ಎಲ್ ಅಧಿಕಾರಿ

## III. ಕ್ರಿಯಾ ಯೋಜನೆ ತಯಾರಿಕೆ ಹಾಗೂ ಅನುಮೋದನೆ :-

2021-22ನೇ ಸಾಲಿಗೆ ಮಂಡಳಿಗೆ ನಿಗದಿಪಡಿಸಿದ ರೂ 1492.97 ಕೋಟಿಗಳ ಅನುದಾನಕ್ಕನುಗುಣವಾಗಿ ಕ್ರಿಯಾ ಯೋಜನೆಯನ್ನು ರೂಪಿಸುವ ಕುರಿತು ದಿನಾಂಕ: 28/05/2021ರ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಅದರಂತೆ ದಿನಾಂಕ: 24/05/2021ರಂದು ಸರ್ಕಾರದ ಪತ್ರದಲ್ಲಿ ಸೂಚನೆಯನುಸಾರ, ಡಾ॥ ನಂಜುಂಡಪ್ಪ ವರದಿಯನ್ವಯ ಹಾಗೂ ಮಾನವ ಅಭಿವೃದ್ಧಿ ವರದಿಯನ್ವಯ ಕಲ್ಯಾಣ ಕರ್ನಾಟಕ ಪ್ರದೇಶವು ಪ್ರಮುಖವಾಗಿ ಶಿಕ್ಷಣ, ಆರೋಗ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ವಲಯಗಳು ಮತ್ತು ಕೈಗಾರಿಕೆ, ಕೌಶಲ್ಯಾಭಿವೃದ್ಧಿ, ನೀರಾವರಿ, ಕುಡಿಯುವ ನೀರು, ರಸ್ತೆ ಮತ್ತು ಸಂಪರ್ಕ, ಅಂತರ್ಜಲ ಸಂರಕ್ಷಣೆ ಹಾಗೂ ಕೃಷಿ ಹಾಗೂ ಕೃಷಿಗೆ ಸಂಬಂಧಿತ ವಲಯಗಳಲ್ಲಿ ಕೂಡ ಅತಿ ಹಿಂದುಳಿದ ಪ್ರದೇಶಗಳಾಗಿರುತ್ತವೆ. ಪ್ರತಿಯೊಂದು ವಲಯಗಳಲ್ಲಿ ಅಂತರಗಳನ್ನು ಗುರುತಿಸಿ ಅಗತ್ಯ ಮತ್ತು ಆದ್ಯತೆಗೆ ಅನುಗುಣವಾಗಿ ಯೋಜನೆಗಳನ್ನು ರೂಪಿಸಬೇಕಾಗಿರುತ್ತದೆ. ವಲಯಗಳನ್ನು ಸಾಮಾಜಿಕ/ ಸಾಮಾಜಿಕೇತರ ಎಂದು ವಿಂಗಡಿಸಲಾಗಿದೆ.

1) ಮೈಕ್ರೋ ಅಡಿಯಲ್ಲಿ ತಾಲೂಕುಗಳ ಒಳಗಡೆ ಪರಿಣಾಮ ಬೀರುವಂತೆ ಕಾಮಗಾರಿಗಳನ್ನು ಆಯ್ಕೆ ಮಾಡಲು ಹಾಗೂ ತಾಲೂಕುವಾರು ಘಟಕವನ್ನಾಗಿ ಪರಿಗಣಿಸಿ CDI ಆಧಾರದ ಮೇಲೆ ತಾಲೂಕುವಾರು ಹಂಚಿಕೆಯಾದ ಅನುದಾನಕ್ಕೆ ಅನುಗುಣವಾಗಿ ಈ ಕೆಳಗೆ ವಿವರಿಸಿದಂತೆ Social sector ದಲ್ಲಿನ (i) ರಿಂದ (iv) ವರೆಗಿನ ವಲಯಗಳಿಗೆ ಶೇ. 40 ರಷ್ಟು ಹಾಗೂ Non Social sector ನ (v) ರಿಂದ (x) ವರೆಗಿನ ವಲಯಗಳಿಗೆ ಶೇ. 60 ರಷ್ಟು ಅನುದಾನಕ್ಕೆ ಅನುಗುಣವಾಗಿ ಮತ್ತು ಆದ್ಯತೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಸಂಬಂಧಪಟ್ಟ ಇಲಾಖೆಗಳ ನಾರ್ಮ್ಸ್‌ಗಳನ್ವಯ ಮತ್ತು ಮಂಡಳಿಯಿಂದ ಹೊರಡಿಸಲಾದ ಮಾರ್ಗಸೂಚಿಗಳನ್ವಯ ಕಾಮಗಾರಿಗಳನ್ನು ಆಯ್ಕೆ ಮಾಡಿ ತಾಲೂಕುವಾರು ಪ್ರಸ್ತಾವನೆಗಳನ್ನು ಸಿದ್ಧಪಡಿಸಿ **"ಜಿಲ್ಲಾ ಸಲಹಾ ಸಮಿತಿ"** ಸಭೆಯಲ್ಲಿ **ಅನುಮೋದನೆ ಪಡೆದು** ಮಂಡಳಿಗೆ ಅನುಮೋದನೆಗಾಗಿ ಸಲ್ಲಿಸುವುದು.

2) ಮ್ಯಾಕ್ರೋ ಅಡಿಯಲ್ಲಿ ಜಿಲ್ಲಾ ಕೇಂದ್ರ ಹಾಗೂ ತಾಲೂಕು ಕೇಂದ್ರಗಳಲ್ಲಿ ಒಳಗೊಂಡಂತೆ ಇಡೀ ಜಿಲ್ಲೆಗೆ ಪರಿಣಾಮ ಬೀರುವಂತಹ ಕಾಮಗಾರಿಗಳನ್ನು ಆಯ್ಕೆ ಮಾಡಲು ಹಾಗೂ **ಜಿಲ್ಲೆಯನ್ನು ಘಟಕವನ್ನಾಗಿ ಪರಿಗಣಿಸಿ** CDI ಆಧಾರದ ಮೇಲೆ ಜಿಲ್ಲಾವಾರು ಹಂಚಿಕೆಯಾದ ಅನುದಾನಕ್ಕೆ ಅನುಗುಣವಾಗಿ Social sector ನ (i) ರಿಂದ (iv) ವರೆಗಿನ ವಲಯಗಳಿಗೆ ಶೇ. 50 ರಷ್ಟು ಹಾಗೂ Non Social sector ನ (v) ರಿಂದ (x) ವರೆಗಿನ ವಲಯಗಳಿಗೆ ಶೇ.50 ರಷ್ಟು ಅನುದಾನಕ್ಕೆ ಅನುಗುಣವಾಗಿ ಮತ್ತು ಆದ್ಯತೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಸಂಬಂಧಪಟ್ಟ ಇಲಾಖೆಗಳ ನಾರ್ಮ್ಸ್‌ಗಳನ್ವಯ ಮತ್ತು ಮಂಡಳಿಯಿಂದ ಹೊರಡಿಸಲಾದ ಮಾರ್ಗಸೂಚಿಗಳನ್ವಯ ಕಾಮಗಾರಿಗಳನ್ನು ಆಯ್ಕೆ ಮಾಡಿ ಜಿಲ್ಲಾವಾರು ಪ್ರಸ್ತಾವನೆಗಳನ್ನು ಸಿದ್ಧಪಡಿಸಿ **"ಜಿಲ್ಲಾ ಸಲಹಾ ಸಮಿತಿ"** ಸಭೆಯ **ಮೂಲಕ ಮಂಡಳಿಯಲ್ಲಿ ಮಾನ್ಯ ಅಧ್ಯಕ್ಷರು, ಕ.ಕ.ಪ್ರ.ಅ.ಮಂಡಳಿಯವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯಲ್ಲಿ ಅನುಮೋದನೆ ಪಡೆಯಲು ಸಲ್ಲಿಸುವುದು.** ಸದರಿ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕಾರ್ಯದರ್ಶಿಗಳು ಸದಸ್ಯರಾಗಿರುತ್ತಾರೆ. ಜಿಲ್ಲಾ ಸಲಹಾ ಸಮಿತಿ ಮೂಲಕ ಸ್ವೀಕರಿಸಲಾದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಬದಲಾವಣೆಯಿಲ್ಲದೇ ಅಥವಾ ಬದಲಾವಣೆಯೊಂದಿಗೆ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವುದು. 2021-22ನೇ ಸಾಲಿನ ವಲಯವಾರು ವಿವರಗಳು ಈ ಕೆಳಗಿನಂತಿರುತ್ತದೆ.

- ಸಾಮಾಜಿಕ ವಲಯ (Social Sector) :-

i. **ಶಿಕ್ಷಣ ವಲಯ:** ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ, ಪದವಿ ಪೂರ್ವ ಶಿಕ್ಷಣ, ಉನ್ನತ ಶಿಕ್ಷಣ (ಪದವಿ ಕಾಲೇಜು ಹಾಗೂ ವಿಶ್ವ ವಿದ್ಯಾಲಯಗಳು), ತಾಂತ್ರಿಕ ಶಿಕ್ಷಣ (ಇಂಜಿನಿಯರಿಂಗ್, ಪಾಲಿಟೆಕ್ನಿಕ್, ಐಟಿಐ, ಇತ್ಯಾದಿ) ಕ್ಕಾಗಿ **ಆನ್‌ಲೈನ್ ತರಬೇತಿಗಾಗಿ ಮೂಲಭೂತ ಸೌಕರ್ಯ ಒದಗಿಸುವುದು** ಹಾಗೂ ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿ, ವಸತಿ ಶಾಲೆಗಳು ಹಾಗೂ ವಸತಿ ನಿಲಯಗಳು ಮತ್ತು ಗ್ರಂಥಾಲಯಗಳು ಇವುಗಳಿಗೆ ರಾಜ್ಯ ಮತ್ತುರಾಷ್ಟ್ರ ಮಟ್ಟದ ನಿಗದಿಪಡಿಸಿದ ಗುರಿಗಳನ್ನು ತಲುಪಲು ಗುರಿಗಳನ್ನು ನಿಗದಿಪಡಿಸಿ, ಮೂಲಭೂತ ಸೌಲಭ್ಯಗಳು ಒದಗಿಸುವುದು ಹಾಗೂ ಶಿಕ್ಷಣ ಗುಣಮಟ್ಟ ಸುಧಾರಣೆ ಕೈಗೊಳ್ಳುವುದು. ಸರ್ಕಾರದಿಂದ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ

ಪ್ರಾಥಮಿಕ ಶಾಲೆಗಳನ್ನು ಪ್ರೌಢ ಶಾಲೆಗಳನ್ನಾಗಿ ಹಾಗೂ ಪ್ರೌಢ ಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತ್ತಿಕರಿಸಿರುವ ಶಾಲೆಗಳಿಗೆ ವೇತನ ಹಾಗೂ ಕಛೇರಿ ವೆಚ್ಚ ಅನುದಾನ ಕಾಯ್ದಿರಿಸುವುದು.

ii. ಆರೋಗ್ಯ ವಲಯ: ಎ.ಎನ್.ಎಂ., ಪಿ.ಹೆಚ್.ಸಿ., ಸಿ.ಹೆಚ್.ಸಿ., ತಾಲೂಕು ಆಸ್ಪತ್ರೆ ಮತ್ತು ವೈದ್ಯಕೀಯ ಶಿಕ್ಷಣ ಹಾಗೂ ಆಸ್ಪತ್ರೆ ಇವುಗಳಿಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ನಿಗದಿಪಡಿಸಿದ ಗುರಿಗಳನ್ನು ತಲುಪಲು ಗುರಿಗಳನ್ನು ನಿಗದಿಪಡಿಸಿ ಮೂಲಭೂತ ಸೌಲಭ್ಯಗಳು ಒದಗಿಸುವುದು ಹಾಗೂ ಆರೋಗ್ಯ ಗುಣಮಟ್ಟ ಸುಧಾರಣೆ ಕೈಗೊಳ್ಳುವುದು.

iii. ಕ್ರೀಡಾ ವಲಯ: ಕ್ರೀಡಾ ಶಾಲೆಗಳ ಅಭಿವೃದ್ಧಿ, ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಒಳಾಂಗಣ ಹಾಗೂ ಹೊರಾಂಗಣ ಕ್ರೀಢೆಗಳಿಗೆ ಸಂಬಂಧಿಸಿದಂತೆ ಮೂಲಭೂತ ಸೌಕರ್ಯಗಳು ಮತ್ತು ಕ್ರೀಢಾಂಗಣಗಳ ಅಭಿವೃದ್ಧಿ. ಇವುಗಳಿಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ನಿಗದಿಪಡಿಸಿದ ಗುರಿಗಳನ್ನು ತಲುಪಲು ಗುರಿಗಳನ್ನು ನಿಗಧಿಪಡಿಸಿ ಮೂಲಭೂತ ಸೌಲಭ್ಯಗಳು ಒದಗಿಸುವುದು ಹಾಗೂ ಗುಣಮಟ್ಟ ಸುಧಾರಣೆ ಕೈಗೊಳ್ಳುವುದು.

- ಉದ್ಯೋಗ ಹಾಗೂ ಕೌಶಲ್ಯ ಅಭಿವೃದ್ಧಿ ವಲಯ: ಉದ್ಯೋಗ ಹಾಗೂ ಕೌಶಲ್ಯ ಅಭಿವೃದ್ಧಿ ವಲಯಕ್ಕೆ ಸಂಬಂಧಿಸಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳುವುದು.
- **ಸಾಮಾಜಿಕೇತರ ವಲಯ (Non Social Sector) :-**

iv. **ಅಂತರ್ಜಲ ಸಂರಕ್ಷಣೆ ವಲಯ:** ಕೆರೆಗಳ ನಿರ್ಮಾಣ ಹಾಗೂ ಅಭಿವೃದ್ಧಿ

v. **ಕೃಷಿ ಹಾಗೂ ಕೃಷಿಗೆ ಸಂಬಂಧಿಸಿದ ವಲಯ:** ಕೃಷಿ ಹಾಗೂ ಕೃಷಿಗೆ ಸಂಬಂಧಿಸಿದ ವಲಯಗಳಲ್ಲಿ ಮೂಲಬೂತ ಸೌಕರ್ಯಗಳನ್ನು ಒದಗಿಸುವುದು.

vi. **ರಸ್ತೆ ಮತ್ತು ಸಂಪರ್ಕ ವಲಯ:** ಗ್ರಾಮೀಣ ಸಂಪರ್ಕ ರಸ್ತೆಗಳು, ಗ್ರಾಮಗಳಲ್ಲಿನ ಒಳ ರಸ್ತೆ ಮತ್ತು ಚರಂಡಿ ಹಾಗೂ ನಗರ ಪ್ರದೇಶದ ವಾರ್ಡಗಳಲ್ಲಿ ರಸ್ತೆ ಮತ್ತು ಚರಂಡಿ ಮತ್ತು ವರ್ತುಲ್ ರಸ್ತೆಗಳ ನಿರ್ಮಾಣ. ಮಂಡಳಿಯಿಂದ ಈಗಾಗಲೇ ಪಿ.ಎಂ.ಜಿ.ಎಸ್.ವೈ ನಾರ್ಮ್ಸ್ ಪ್ರಕಾರ ಮಂಜೂರಾದ ಕಾಮಗಾರಿಗಳಿಗೆ ಆಯಾ ಆರ್ಥಿಕ ವರ್ಷದಲ್ಲಿ ನಿರ್ವಹಣೆ ಅನುದಾನ ಕಾಯ್ದಿರಿಸುವುದು.

vii. **ನೀರು ಸರಬರಾಜು ವಲಯ:** ಕುಡಿಯುವ ನೀರು ಸರಬರಾಜು ಸೌಲಭ್ಯ ಒದಗಿಸುವುದು.

viii. **ಪ್ರವಾಸೋಧ್ಯಮ**, ಸಾಂಸ್ಕೃತಿಕ ಹಾಗೂ ಹೆರಿಟೇಜ್ ಸೌಲಭ್ಯ ಒದಗಿಸುವುದು.

3) ಸರ್ಕಾರವು ಹರಪನಹಳ್ಳಿ ತಾಲೂಕನ್ನು ಬಳ್ಳಾರಿ ಜಿಲ್ಲೆಗೆ ಸೇರ್ಪಡಿಸಿ ಅಧಿಸೂಚಿಸಿರುತ್ತದೆ. ಅದರಂತೆ ಈ ತಾಲ್ಲೂಕಿಗೆ ಹಾಗೂ ಕಳೆದ ಸಾಲಿನಲ್ಲಿ ರಚನೆಯಾದ ಹೊಸ ತಾಲೂಕುಗಳಿಗೆ ಸಿ.ಡಿ.ಐ ಸೂಚ್ಯಾಂಕ ಇಲ್ಲದೇ ಇರುವುದರಿಂದ ಹೊಸ ತಾಲೂಕಿಗೆ ಯಾವ ತಾಲೂಕಿನಿಂದ ಗ್ರಾಮಗಳು ಸೇರಿರುತ್ತವೆ ಆ ತಾಲೂಕಿನ ಅನುದಾನದಲ್ಲಿ ಅನುಪಾತದಕ್ಕನುಗುಣವಾಗಿ ಹೊಸ ತಾಲೂಕಿಗೆ ಅನುದಾನ ಹಂಚಿಕೆ ಮಾಡಿ ಕ್ರಿಯಾ ಯೋಜನೆ ರೂಪಿಸುವುದು.

4) ಮಂಡಳಿಯ ಸುತ್ತೋಲೆ ಸಂ: ಹೈಕಪ್ರಮಂ:ಯೋಶಾ:ಸಮಿತಿ:9:18-19 ದಿನಾಂಕ: 20/08/2018ರಲ್ಲಿ ವಿವರಿಸಿದಂತೆ ಜಿಲ್ಲಾ ಮಟ್ಟದಲ್ಲಿ ಅನುಷ್ಠಾನದ ಸಮಿತಿ ಹಾಗೂ ತಾಲ್ಲೂಕು ಮಟ್ಟದ ಅನುಷ್ಠಾನ ಸಮಿತಿಗಳು ಕಾರ್ಯಕಲಾಪಗಳನ್ನು ನಡೆಯಿಸಿ, ಕ್ರಿಯಾ ಯೋಜನೆಯ ಅನುಷ್ಠಾನಕ್ಕೆ ಕ್ರಮಜರುಗಿಸುವುದು.

2021-22ನೇ ಸಾಲಿಗೆ ಮೈಕ್ರೋ ಅಡಿಯಲ್ಲಿ ತಾಲ್ಲೂಕುವಾರು ಮತ್ತು ಮ್ಯಾಕ್ರೋ ಅಡಿಯಲ್ಲಿ ಜಿಲ್ಲಾವಾರು ಸಾಮಾನ್ಯ, ಎಸ್.ಸಿ.ಪಿ, ಟಿ.ಎಸ್.ಪಿ, ಅಡಿಯಲ್ಲಿ **ಮ್ಯಾಕ್ರೋ ಕ್ರೀಯಾ ಯೋಜನೆ ಅಡಿಯಲ್ಲಿ ಸಾಮಾಜಿಕ ವಲಯಕ್ಕೆ ಶೇ.50 ರಷ್ಟು ಹಾಗೂ ಸಾಮಾಜಿಕೇತರ ವಲಯಕ್ಕೆ ಶೇ.50 ರಷ್ಟು ಅನುದಾನವನ್ನು ನಿಗದಿಪಡಿಸಲಾಗಿದೆ. ರಾಜ್ಯಾದ್ಯಾಂತ ಕೋವಿಡ್-19 ಸಾಂಕ್ರಾಮಿಕ ರೋಗ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ಆರೋಗ್ಯ ವಲಯಕ್ಕೆ ಸಂಬಂಧಿಸಿರುವುದರಿಂದ ಸಾಮಾಜಿಕ ಮತ್ತು ಸಾಮಾಜಿಕೇತರ ವಲಯಗಳಲ್ಲಿ ಕೋವಿಡ್-19 ಕ್ಕೆ ಸಂಬಂಧಿಸಿದ ಉಪಕರಣಗಳು, ಕಿಟ್‌ಗಳು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಿದಲ್ಲಿ ಪರಿಗಣಿಸಲಾಗುವುದು. ಉಳಿದ ಇತರೆ ಯಾವುದೇ ಕಾಮಗಾರಿಗಳಿಗೆ ವಲಯವಾರು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.** ಆದ್ದರಿಂದ ಮೈಕ್ರೋ ಮತ್ತು ಮ್ಯಾಕ್ರೋ ಅಡಿಯಲ್ಲಿ ನಿಗದಿಪಡಿಸಿದ ಅನುದಾನಕ್ಕೆ ಅಗತ್ಯಗನುಗುಣವಾಗಿ ಆದ್ಯತೆ ಮೇರೆಗೆ ವಲಯವಾರು ಕಾಮಗಾರಿಗಳನ್ನು ಗುರುತಿಸಿ, ಜಿಲ್ಲಾ ಮಟ್ಟದ ಸಲಹಾ ಸಮಿತಿಯ ಸಭೆಯಲ್ಲಿ ಅನುಮೋದನೆ ಪಡೆದು ನಡುವಳಿಗಳೊಂದಿಗೆ ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ, ಮೇಲೆ ವಿವರಿಸಿದಂತೆ ಅನುಷ್ಠಾನ ಇಲಾಖೆ ನಿಗದಿಪಡಿಸಿ ಅನುಮೋದನೆಗಾಗಿ ಮಂಡಳಿಗೆ ಸಲ್ಲಿಸುವುದು.

ಕ್ರಿಯಾ ಯೋಜನೆ ಕುರಿತು ಷರತ್ತುಗಳು :

1) ಸರ್ಕಾರದ ಆದೇಶದ ಸಂ:ಪಿಡಿಎಸ್ 19 ಹೈಕವಿ 2019, ಬೆಂಗಳೂರು ದಿನಾಂಕ:20/09/2019ರನ್ವಯ ಕಲಬುರಗಿ ಜಿಲ್ಲಾ ಆರೋಗ್ಯ ಅಧಿಕಾರಿಗಳು ಕಚೇರಿ ಆವರಣದಲ್ಲಿ ನಿರ್ದೇಶಕರು ಶ್ರೀ ಜಯದೇವ ಹೃದ್ರೋಗ ವಿಜ್ಞಾನಗಳ ಸಂಸ್ಥೆಯ 300 ಹಾಸಿಗೆ ಸಾಮ್ಯರ್ಥದ ಪ್ರತ್ಯೇಕ ಆಸ್ಪತ್ರೆಯನ್ನು ರೂ.150.00 ಕೋಟಿಗಳ ವೆಚ್ಚದಲ್ಲಿ ಕ.ಕ.ಪ್ರ.ಅ.ಮಂಡಳಿಯ ಅನುದಾನದಲ್ಲಿ ಸ್ಥಾಪಿಸಲು ಯೋಜನೆ ಗಾತ್ರದ ಪೂರ್ಣ ವೆಚ್ಚವನ್ನು ಭರಿಸಲು ಹಾಗೂ ಸದರಿ ಅನುದಾನವನ್ನು 2019-20, 2020-21 ಹಾಗೂ 2021-22 ನೇ ಸಾಲುಗಳಲ್ಲಿ ಪ್ರತಿ ವರ್ಷ ಕ್ರಮವಾಗಿ ರೂ.50.00 ಕೋಟಿಗಳಂತೆ ಒಟ್ಟು ರೂ.150.00 ಕೋಟಿಗಳನ್ನು ಹಂತ ಹಂತವಾಗಿ ಬಿಡುಗಡೆ ಮಾಡಲು ಸರ್ಕಾರದಿಂದ ಮಂಜೂರಾತಿ ನೀಡಲಾಗಿರುತ್ತದೆ. **ಮಂಡಳಿಯಲ್ಲಿ ಸರ್ಕಾರದ ಆದೇಶವನ್ನು ಪಾಲನೆ ಮಾಡಬೇಕಾಗಿರುತ್ತದೆ.** ಈಗಾಗಲೇ ಶ್ರೀ ಜಯದೇವ ಆಸ್ಪತ್ರೆ ನಿರ್ಮಾಣ ಕಾಮಗಾರಿ ಪ್ರಾರಂಭವಾಗಿರುವುದರಿಂದ ಮಂಡಳಿಯಿಂದ ನೀಡಬೇಕಾದ 2019-20ನೇ ಸಾಲಿನ ಬಾಕಿ ಅನುದಾನ ರೂ.12.63 ಕೋಟಿ ಹಾಗೂ 2020-21ನೇ ಸಾಲಿನ ರೂ.50.00 ಕೋಟಿಗಳು ಸೇರಿ ಒಟ್ಟು 62.63 ಕೋಟಿ ಅನುದಾನಕ್ಕೆ 2021-22ನೇ ಸಾಲಿಗೆ ಮಂಡಳಿಗೆ ಸರ್ಕಾರದಿಂದ ಹಂಚಿಕೆ ಮಾಡುವ ಅನುದಾನದಲ್ಲಿ ಆಯಾ ಜಿಲ್ಲೆಯ ಮ್ಯಾಕ್ರೋ ಯೋಜನೆ ಅಡಿಯಲ್ಲಿ

ಕಲಬುರಗಿ ಜಿಲ್ಲೆಗೆ ಸಂಬಂಧಿಸಿದಂತೆ ರೂ.12.63 ಕೋಟಿ ಹಾಗೂ ಉಳಿದ 05 ಜಿಲ್ಲೆಗಳಿಗೆ ಸಂಬಂಧಿಸಿದಂತೆ ತಲಾ ರೂ.10.00 ಕೋಟಿಗಳಂತೆ ಒಟ್ಟು 06 ಜಿಲ್ಲೆಗಳಿಗೆ ಸಂಬಂಧಿಸಿದಂತೆ ರೂ.62.63 ಕೋಟಿ ಅನುದಾನವನ್ನು ಕಡಿತಗೊಳಿಸಿ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾಪಿಸಿರುವಂತೆ, ಸರ್ಕಾರದಿಂದ ಬಿಡುಗಡೆಯಾಗುವ ಹೆಚ್ಚುವರಿ ಅನುದಾನವನ್ನು ಮರು ಭರಿಸುವ ಷರತ್ತಿಗೆ ಒಳಪಟ್ಟು ಹಾಗೂ ಮುಂದೆ ಜರಗುವ ಮಂಡಳಿಯ ಸಭೆಯಲ್ಲಿ ಘಟನ್ನೋತ್ತರ ಮಂಜೂರಾತಿ ಪಡೆಯುವ ಷರತ್ತಿಗೊಳಪಟ್ಟು ಕ್ರಿಯಾ ಯೋಜನೆ ಮಂಜೂರಾತಿ ನೀಡಲಾಗಿದ್ದು, ಸದರಿ ಪ್ರಸ್ತಾವನೆಯನ್ನು ಜಿಲ್ಲಾ ಸಲಹಾ ಸಮಿತಿಯಲ್ಲಿ ಕಡ್ಡಾಯವಾಗಿ ಅಳವಡಿಸಿ ಅನುಮೋದನೆ ಪಡೆದು ಮಂಡಳಿಗೆ ಸಲ್ಲಿಸಲು ಕ್ರಮ ಕೈಗೊಳ್ಳುವುದು.

2) ಸಚಿವ ಸಂಪುಟದ ಪ್ರಕರಣ ಸಂ:ಸಿ:16/2021, ದಿನಾಂಕ:-13/01/2021ರಲ್ಲಿ ನೀಡಿರುವ ಅನುಮೋದನೆ ಹಾಗೂ ಆರ್ಥಿಕ ಇಲಾಖೆಯ ದಿನಾಂಕ: 08/01/2021, 19/01/2021 ಮತ್ತು 21/01/2021ರ ಟಿಪ್ಪಣಿ ಮತ್ತು ಅಧಿಸೂಚನೆಗಳಲ್ಲಿ ನೀಡಿರುವ ಸಹಮತಿ ಮೇರೆಗೆ ಟಾಟಾ ಟೆಕ್ನೋಲೋಜಿಸ್ಸ್ ರವರ ಸಹ ಭಾಗಿತ್ವದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಉನ್ನತ್ತೀಕರಿಸಲು ಮಂಡಳಿ ವ್ಯಾಪ್ತಿಯ 06 ಜಿಲ್ಲೆಗಳಿಗೆ ಒಟ್ಟು 33 ಸರ್ಕಾರಿ ಕೈಗಾರಿಕಾ ಸಂಸ್ಥೆಗಳನ್ನು ಉನ್ನತ್ತೀಕರಿಸಲು ಒಟ್ಟು ರೂ.4898.92 ಲಕ್ಷಗಳ ಅನುದಾನವನ್ನು ಒದಗಿಸಿ ಕರ್ನಾಟಕ ರಾಜ್ಯ ನಿಮಾಣ ಕೇಂದ್ರದ (ಕಾರ್ನಿಕ್) ಮುಖಾಂತರ ನಿರ್ಮಿತಿ ಕೇಂದ್ರಗಳಿಂದ ನಿರ್ಮಾಣ ಮಾಡಲು ಕೆ.ಟಿ.ಪಿ.ಪಿ ಕಾಯ್ದೆ – 1999 ರ ಕಲಂ 4(ಜಿ) ರಡಿ ವಿನಾಯಿತಿ ನೀಡಿ ಸಚಿವ ಸಂಪುಟದಲ್ಲಿ ಆದೇಶ ಮಾಡಲಾಗಿರುತ್ತದೆ. ಅದರಂತೆ ಮಾನ್ಯ ಅಧ್ಯಕ್ಷರು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ರವರು ಒಪ್ಪಿಗೆ ನೀಡಿರುತ್ತಾರೆ. **ಮಂಡಳಿಯಲ್ಲಿ ಸರ್ಕಾರದ ಆದೇಶವನ್ನು ಪಾಲನೆ ಮಾಡಬೇಕಾಗಿರುತ್ತದೆ.** ಆದ್ದರಿಂದ **ಮಂಡಳಿ ಆದೇಶ ದಿನಾಂಕ:** 30.04.2021 ರನ್ವಯ 2021-22ನೇ ಸಾಲಿನ ಮ್ಯಾಕ್ರೋ ಕ್ರಿಯಾ ಯೋಜನೆ ಅಡಿಯಲ್ಲಿ ಆರು ಜಿಲ್ಲೆಗಳಿಗೆ ರೂ.4898.92 ಲಕ್ಷಗಳ ಅನುದಾನಕ್ಕೆ ಕ್ರಿಯಾ ಯೋಜನೆ ಮಂಜೂರಾತಿ ನೀಡಲಾಗಿರುತ್ತದೆ. ಸದರಿ ಆದೇಶಗಳ ಕುರಿತು ಸರ್ಕಾರದ ಗಮನಕ್ಕೆ ತರಲಾಗಿದೆ. ಆದ್ದರಿಂದ ಸದರಿ ಪ್ರಸ್ತಾವನೆಯನ್ನು ಕಡ್ಡಾಯವಾಗಿ ಕ್ರಿಯಾ ಯೋಜನೆಯಲ್ಲಿ ಅಳವಡಿಸಿ ಜಿಲ್ಲಾ ಸಲಹಾ ಸಮಿತಿಯಲ್ಲಿ ಅನುಮೋದನೆ ಪಡೆದು ಮಂಡಳಿಗೆ ಸಲ್ಲಿಸಲು ಕ್ರಮ ಕೈಗೊಳ್ಳುವುದು.

3) ರಾಜ್ಯಾದ್ಯಾಂತ ಕೋವಿಡ್-19 ಸಾಂಕ್ರಾಮಿಕ ರೋಗ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ಆರು ಜಿಲ್ಲೆಗಳಿಗೆ ಸಂಬಂಧಿಸಿದಂತೆ ಪ್ರಸ್ತಾವನೆಗಳು ಮಂಡಳಿಗೆ ಸ್ವೀಕೃತವಾಗಿದ್ದು, ಪ್ರಸ್ತುತ ಸಾಲಿನಲ್ಲಿ ಪರಿಗಣಿಸಿ ಮಾಕ್ರೋ ಅಡಿಯಲ್ಲಿ (ಕೊಪ್ಪಳ ಜಿಲ್ಲೆಗೆ ಮೈಕ್ರೋ ಅಡಿಯಲ್ಲಿಯೂ) ಕ್ರಿಯಾ ಯೋಜನೆ ಮಂಜೂರಾತಿ ನೀಡಲಾಗಿರುತ್ತದೆ. ಆದ್ದರಿಂದ ಸದರಿ ಪ್ರಸ್ತಾವನೆಗಳನ್ನು ಕಡ್ಡಾಯವಾಗಿ ಕ್ರಿಯಾ ಯೋಜನೆಯಲ್ಲಿ ಅಳವಡಿಸಿ ಜಿಲ್ಲಾ ಸಲಹಾ ಸಮಿತಿಯಲ್ಲಿ ಅನುಮೋದನೆ ಪಡೆದು ಮಂಡಳಿಗೆ ಸಲ್ಲಿಸಲು ಕ್ರಮ ಕೈಗೊಳ್ಳುವುದು.

4) ಸರ್ಕಾರದಿಂದ ಹೊರಡಿಸಿದ ಆದೇಶಗಳನ್ನು ಕೂಡಾ ಮಂಡಳಿಯಲ್ಲಿ ಪಾಲನೆ ಮಾಡಬೇಕಾಗಿರುತ್ತದೆ.

ಕಾರ್ಯದರ್ಶಿಗಳು,
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ
ಮಂಡಳಿ, ಕಲಬುರಗಿ.

ಗೆ,

1) ಎಲ್ಲಾ ಜಿಲ್ಲಾಧಿಕಾರಿಗಳು, ಕಲ್ಯಾಣ ಕರ್ನಾಟಕ ವಿಭಾಗ.
2) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕಲ್ಯಾಣ ಕರ್ನಾಟಕ ವಿಭಾಗ.
3) ಎಲ್ಲಾ ಅನುಷ್ಠಾನ ಇಲಾಖಾ ಅಧಿಕಾರಿಗಳು, ಕಲ್ಯಾಣ ಕರ್ನಾಟಕ ವಿಭಾಗ.
4) ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು, ಕಲ್ಯಾಣ ಕರ್ನಾಟಕ ವಿಭಾಗ.
5) ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಯವರು ಕ.ಕ.ಪ್ರ.ಅ.ಮಂಡಳಿ, ಕಲಬುರಗಿ.

**ಪ್ರತಿಯನ್ನು:**

**1)** ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.

**2)** ಶಾಸಕರು, ವಿಧಾನ ಸಭಾ ಕ್ಷೇತ್ರ ...................... ಇವರಿಗೆ ಮಾಹಿತಿಗಾಗಿ.